ಶ್ರೀ ಎಸ್. ಆರ್. ಬೊಮ್ಮಾಯಿ.—ಕೊಡುತ್ತೇನೆ.

ಉಪಾಧ್ಯಕ್ಷರು.—ಕಾನಡೆಯವರೇ ಕೂಡಿ.

ಶ್ರೀ ವಸಂತ ವಿ. ಸಾಲಿಯಾನ.—ಅಸೆಂಬ್ಲಿ ಇರುವಾಗಲೇ ಕೊಡಿ,

ಉಪಾಧ್ಯಕ್ಷರು.—ಮುಂದಿನ ವಾರ ಕೊಡುತ್ತೇನೆಂದು ಹೇಳಿದ್ದಾರೆ.

ಕುಂದಾಪುರ ತಾಲ್ಲೂಕಿನಲ್ಲಿನ ಅಂಗನವಾಡಿಗಳ ಕುರಿತಂ

೨೩೧೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು),—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಂ ಕುಂದಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ?

ಆ) ಹೊಸ ಅಂಗನವಾಡಿಗಳ ಸ್ಥಾಪನೆ ಅಥವಾ ಮಕ್ಕಳ ಸಂಖ್ಯೆ ಅಧಿಕವಿರುವಲ್ಲಿ ಶಾಖಾ ಅಂಗನವಾಡಿಗಳ ಸ್ಥಾಪನೆಗೆ ಅವಕಾಶವಿದೆಯೇ ?

ಇ) ಅಂಗನವಾಡಿಗಳಿಗೆ ಕನಿಷ್ಟ ಹಾಜರಾತಿ ಎಷ್ಟಿರಬೇಕೆಂದು ನಿಯಮ ಇದೆಯೇ ?

ಈ) ಒಂದು ಅಂಗನವಾಡಿಗೆ ತಿಂಗಳಿಗೆ ವೆಚ್ಚವಾಗಂತ್ತಿರುವ ಹಣವೆಷ್ಟು ?

ಉ) ಅತ್ಯಂತ ಕಡಿಮೆ ಹಾಜರಿ ಇರುವಲ್ಲಿ ಇತರ ಅವಶ್ಯ ಕೇಂದ್ರಗಳಿಗೆ ಬದಲಾವಣೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೩೧೨ ಅಂಗನವಾಡಿಗಳು.

ಆ) ಇಲ್ಲ.

ಇ) ಇಲ್ಲ.

ಈ) ಸುಮಾರು ೨,೩೦೦ ರೂಪಾಯಿಗಳು.

ಉ) ಅತ್ಯಂತ ಕಡಿಮೆ ಹಾಜರಿ ಇರುವಲ್ಲಿ ಹೆಚ್ಚು ಫಲಾನುಭವಿಗಳು ಲಭ್ಯವಿರುವ ಹಳ್ಳಿಗಳಿಗೆ ಕೇಂದ್ರವನ್ನು ವರ್ಗಾಯಿಸಿ ಅಂಗನವಾಡಿಯನ್ನು ನಡೆಸಲಾಗುತ್ತಿದೆ.

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕು ಬಹಳ ವಿಸ್ತಾರವಾಗಿದ್ದು ಬಹಳಷ್ಟು ಅಂಗನವಾಡಿಗಳಿಗೆ ಬೇಡಿಕೆ ಇದೆ. ಈಗ ೩೧೨ ಅಂಗನವಾಡಿಗಳು ಇವೆ ಹೊಸ ಅಂಗನವಾಡಿ ಸ್ಥಾಪನೆಗೆ ಅವಕಾಶ ಇಲ್ಲವೆಂದು ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ಅಂಗನವಾಡಿಗಳಿಗೆ ಕನಿಷ್ಟ ಹಾಜರಾತಿ ಎಷ್ಟು ಇರಬೇಕು ಎಂಬ ನಿಯಮ ಕೂಡ ಇಲ್ಲ ಎನ್ನುವ ಉತ್ತರ ಬಂದಿದೆ, ಒಂದು ಅಂಗನವಾಡಿಗೆ ಒಂದು ತಿಂಗಳಿಗೆ ೨೩೦೦ ರೂಪಾಯಿ ಖರ್ಚು ಆಗುತ್ತಿದೆ. ಇಷ್ಟು ವೆಚ್ಚ ಆಗುವಾಗ ಸಾಧಾರಣ ಕನಿಷ್ಟ ೩೦ ಅಥವಾ ೪೦ ಆಷ್ಟಾದರೂ ಹಾಜರಾತಿ ಇರಬೇಕು. ಕೇವಲ ಹತ್ತು ಮಕ್ಕಳು ಇರುವಾಗಲೂ ಅಂಗನವಾಡಿಗಳು ನಡೆಯುತ್ತಿವೆ. ಇದರಿಂದ ದುಂದುವೆಚ್ಚ ಆಗುತ್ತಿದೆ ಎಂದು ನಾನು ತಾಲ್ಲೂಕ್ ಪಂಚಾಯತ್‌ನಲ್ಲಿ ಹೇಳಿದ್ದೇನೆ. ಎಷ್ಟು ಮಕ್ಕಳು ಕನಿಷ್ಟ ಇರಬೇಕು ಎಂಬ ನಿಯಮವನ್ನು ವಿಧಿಸಿದ್ದೀರಾ ? ವಿಧಿಸದಿದ್ದರೆ ಯಾಕೆ ವಿಧಿಸಬಾರದು ? ಎರಡನೆಯದಾಗಿ ಅತ್ಯಂತ ಕಡಿಮೆ ಸಂಖ್ಯೆ ಇರುವಲ್ಲಿ ಹೆಚ್ಚು ಫಲಾನುಭವಿಗಳನ್ನು ಹಳ್ಳಿಗಳಿಗೆ ವರ್ಗಾಯಿಸಲಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಸಮರ್ಪಕ ಅಲ್ಲ, ನಾನು ತಾಲ್ಲೂಕು ಪಂಚಾಯತ್ ಅಧ್ಯಕ್ಷನಾಗಿದ್ದೇನೆ. ಈ ವಿಚಾರವಾಗಿ ಅನೇಕ ಸಲ ದೂರು ಕೊಟ್ಟರೂ ಕೂಡ ವರ್ಗಾಯಿಸಲು ಸಾಧ್ಯವಾಗುವುದಿಲ್ಲ ಎಂಬ ಉತ್ತರ ಅಧಿಕಾರಿಗಳಿಂದ ಬಂದಿದೆ. ಅಧಿಕಾರದ ಯಂತ್ರದ ಹಿಡಿತ ಹೀಗೆ ಇದೆ. ಅನೇಕ ಹಳ್ಳಿಗಳು ಇದ್ದಾರೆ ವರ್ಗಾಯಿಸುತ್ತೇವೆ ಎನ್ನುವುದು ಸತ್ಯಕ್ಕೆ ದೂರವಾದದು. ಇದನ್ನು ವರ್ಗಾಯಿಸುವ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ —ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಒಂದು ನೀತಿ ಇದೆ. ಒಂದು ಸಾವಿರ ಜನಸಂಖ್ಯೆಗೆ ಒಂದು ಅಂಗನವಾಡಿ ಇರಬೇಕು ಎಂಬ ನಿಯಮ ಇದೆ. ಆದರ ಪ್ರಕಾರ ಒಂದು ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವಲ್ಲಿ ಅಂಗನವಾಡಿಗಳನ್ನು ತೆರೆಯಲಾಗಿದೆ. ಅಂಗನವಾಡಿಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದಾಗ ಸಿ.ಡಿ.ಪಿ.ಓ. ಸ್ಥಳೀಯ ಅಧಿಕಾರಿಗಳು, ಅಸಿಸ್ಟೆಂಟ್ ಡೈರೆಕ್ಟರ್, ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ಇದನ್ನು ತೀರ್ಮಾನ ಮಾಡಿ ಶಿಫ್ಟ್ ಮಾಡುವ ಅಧಿಕಾರ ಇದೆ. ಕೆಲವು ನಾರ್ಮ್ಸ್ ಪ್ರಕಾರ ಅಂಗನವಾಡಿಯಲ್ಲಿ ೬೮ ಜನ ಮಕ್ಕಳಿಗೆ ಮತ್ತು ೧೦ ಜನರಿಗೆ ಗರ್ಭಿಣಿ ಸ್ತ್ರೀಯರಿಗೆ ಅವಕಾಶ ಇದೆ.

ಶ್ರೀ ಜಿ. ಎಸ್. ಆಚಾರ್.—ನನ್ನದು ಸಾಮಾಜಿಕ ಕಳಕಳಿ ಇಷ್ಟೇ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಇಲ್ಲದೇ ಇರುವಾಗ ನಮ್ಮ ರಾಜ್ಯದ ಅಧಿಕಾರಿಗಳು ಇದನ್ನು ಫಿಕ್ಸ್ ಮಾಡಿ ಅಂಗನವಾಡಿಗಳನ್ನು ತೆರೆದರು. ಈಗ ಮಂಡಲ್ ಪಂಚಾಯತ್ ಬಂದಿದೆ, ಜಿಲ್ಲಾ ಪರಿಷತ್ ಬಂದಿದೆ. ಇಂತಹ ವ್ಯವಸ್ಥೆಗಳು ಆಗಿರುವಾಗ ನಮ್ಮ ಮಂಡಲದಲ್ಲಿ ಈಗ ಹಳ್ಳಿ ಬಿಟ್ಟು ಮತ್ತೊಂದು ಕಡೆ ಇಂತಹ ವ್ಯವಸ್ಥೆ ಆಗುತ್ತಾ ಇಲ್ಲ. ಅಧಿಕಾರಿಗಳು ನಾವು ಫಿಕ್ಸ್ ಮಾಡಿರುವ ಅಂಗನವಾಡಿಗಳನ್ನು ಬದಲಾಯಿಸಲು ಸಾಧ್ಯವೇ ಇಲ್ಲ ಎನ್ನುವ ಮನೋಭಾವದಲ್ಲಿ ಇದ್ದಾರೆ. ಇದನ್ನು ಕುರಿತು ಚಿಂತನೆ ಮಾಡಬೇಕಾದ್ದು ಅವಶ್ಯಕ ಇದೆ, ಚಿಂತನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಸಾವಿರ ಜನಸಂಖ್ಯೆ ಇರುವಂತಹ ಕಡೆ ಅಂಗನವಾಡಿಗಳನ್ನು ಮಾಡಿರುತ್ತೇವೆ. ಇದರಲ್ಲಿ ಸುಮಾರು ೪–೫ ಹಳ್ಳಿಗಳು ಸೇರಿರುತ್ತವೆ. ಇವುಗಳಿಗೆ ಒಂದು ಕೇಂದ್ರವನ್ನು ಮಾಡಿರುತ್ತೇವೆ. ಹಾಗೆಯೇ ಇದನ್ನು ಬದಲಾವಣೆ ಮಾಡುವುದಕ್ಕೆ ಅವಕಾಶ ಇದೆ. ಸ್ಥಳೀಯ ಯೋಜನಾ ಅಧಿಕಾರಿಗಳು, ಅಸಿಸ್ಟೆಂಟ್ ಡೈರೆಕ್ಟರ್, ಸೋಷಿಯಲ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನವರು ಇರುತ್ತಾರೆ. ಕೆಲವು ನಾರ್ಮ್ಸ್ ಇವೆ. ಚುನಾಯಿತ ಸದಸ್ಯರು ಇದನ್ನು ಕೆಗೆದುಕೊಂಡಾಗ ಬದಲಾವಣೆ ಮಾಡುವುದಕ್ಕೆ ಅವಕಾಶ ಇದೆ.

ಬ್ರಹ್ಮಾವರ ಸಹಕಾರ ಸಕ್ಕರೆ ಕಾರ್ಖಾನೆ

೧೯೬೬ ಶ್ರೀಮತಿ ಪಾನೋರವೂ ಮುದ್ದರಾಜ್ (ಉಡುಪಿ).— ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ೧೯೮೬–೮೭ನೇ ಸಾಲಿಗೆ ಉತ್ಪಾದಿಸಿದ ಸಕ್ಕರೆ ಪ್ರಮಾಣವೆಷ್ಟು?

ಆ) ಸದರಿ ಸಾಲುಗಳಲ್ಲಿ ಸಿಬ್ಬಂದಿ ಹಾಗೂ ಉತ್ಪಾದನೆಗೆ ಅನುಸರಿಸಿದಂತೆ ತಗಲಿದ ವೆಚ್ಚವೆಷ್ಟು? (ಪ್ರತ್ಯೇಕ ಅಂಕಿಅಂಶಗಳನ್ನು ನೀಡುವುದು)

ಇ) ಸದರಿ ಸಾಲುಗಳಲ್ಲಿ ಕಾರ್ಖಾನೆಯು ಅನುಭವಿಸಿದ ಲಾಭ ಮಂತ್ತು ನಷ್ಟ ಎಷ್ಟು?

ಶ್ರೀ ಆರ್. ಪ್ರೋತದಾರ್ (ಕೈಗಾರಿಕಾ ಸಹಕಾರ ಸಚಿವರು).—

ಅ) ವರ್ಷ	ಉತ್ಪಾದಿಸಿದ ಸಕ್ಕರೆ ಪ್ರಮಾಣ ಮೆ. ಟನ್‌ಗಳಲ್ಲಿ.
೧೯೮೬–೮೭	೨೫೭೨
೧೯೮೭–೮೮	೪೦೬೦